Regd No BG 155 6-11-1969

SATYAVADI Daily, MYSORE 4 ★ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಸರ್ಕಾರಕ್ಕೆ ಶಿವಮೊಗ್ಗ ಪೌರಸಭೆಯ ಎಚ್ಚರಿಕೆ

ತಾ. 7–11–69 ರಂದು ಜುಬಿಲೀ ಪ್ರಾರಂಭ

... ದಿನವಹಿ 4 ಆಟಗಳು ....

ಒಲಂಪಿಯಾ ಚಿತ್ರಮಂದಿರದಲ್ಲಿ

ಪ್ರತಿ ದಿನ : 10–30. 3–30. 6–30 ಮತ್ತು 9–45 ಕ್ಕೆ

ಓರ್ವ ಕೊಲೆಪಾತಕಿಯ ಅತ್ಯಂತ ರೋಮಾಂಚಕಾರಿ ನಿಗೂಢ ರಹಸ್ಯ ಕಥೆ

ಬಿ. ಆರ್. ಫಿಲ್ಮ್ಸ್‌ರವರ

ಇತಿಘ್ನಾಕ್

(ವರ್ಣದಲ್ಲಿ)

ಪಾತ್ರ : ನಂದಾ ಮತ್ತು ರಾಜೇಶ್-ಖನ್ನಾ ನಿರ್ದೇಶನ : ಯಶ್ ಚೋಪ್ರಾ

ವಿ. ಸೂ. ಚಿತ್ರಪ್ರದರ್ಶನ ಆರಂಭನಾಗುವುದಕ್ಕೆ ಮುಂಚೆ ಪ್ರೇಕ್ಷಕರು ತಮ್ಮ ತಮ್ಮ ಆಸನಗಳನ್ನು ಕಾಯ್ದಿರಿಸಿಕೊಳ್ಳಬೇಕಾಗಿ ವಿನಂತಿ. ಪ್ರದರ್ಶನದ ಆರಂಭದ ನಂತರ ಟಿಕೆಟ್ ಮಾರಾಟವನ್ನು ನಿಲ್ಲಿಸಲಾಗುವುದು.

ಎಂ ಎಲ್ ಎ ಗಳ ಬಂಧನ

ಜಯಪುರ— ರಾಜಸ್ಥಾನ ನಾಲಾ ಭಾಗದಲ್ಲಿ ಸರ್ಕಾರಿ ವ್ಯವಸಾಯ ಭೂಮಿಯ ಹರಾಜಿನ ವಿರುದ್ಧ ಪ್ರದರ್ಶನ ನಡೆಸಿದ ಇಬ್ಬರು ಶಾಸನಸಭಾ ಸದಸ್ಯರು ಬಂಧಿಸಲ್ಪಟ್ಟರು.

ರೂ 14 ಕೋಟಿ ಸಾಲ

ಹಾಸನ— ರೈತರಿಗೆ ಭೂಮಿ ಅಭಿವೃದ್ಧಿಗೊಳಿಸಲು ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕು ಮೂಲಕ ರೂ 14 ಕೋಟಿ ಸಾಲಾ ನೀಡಲಾಗುತ್ತದೆಂದು ಬ್ಯಾಂಕಿನ ಅಧ್ಯಕ್ಷರು ಹೇಳಿದ್ದಾರೆ.

ಸೈಕಲ್ ತೆರಿಗೆ

ಬೆಂಗಳೂರು— ಮೈಸೂರಿನಲ್ಲಿ ಸೈಕಲ್ ತೆರಿಗೆ ವಜಾ ವಿಷಯದಲ್ಲಿ ಪೌರಸಭಾ ನಿಯೋಗವು ಪೌರಾಡಳಿತ ಮಂತ್ರಿ ಶ್ರೀ ಬಿ ಎಂ ಪಾಟೀಲರನ್ನು ಕಂಡು ಎಲ್ಲ ವಿಚಾರವನ್ನೂ ತಿಳಿಸಿತು – ಮಂತ್ರಿಗಳು ಸಹಾನುಭೂತಿ ವ್ಯಕ್ತಪಡಿಸಿ, ವಿಷಯವನ್ನು ಮಂತ್ರಿಮಂಡಲದ ಮುಂದಿಡುವುದಾಗಿ ಭರವಸೆ ಇತ್ತರು.

ಮಹತ್ವ ತ್ಯಾಗ

ಅಮೃತಸರ— ಗುರು ನಾನಕರ ಜನ್ಮ ದಿನವಾದ ನವೆಂಬರು 24 ರ ಮಾರನೇದಿನ ಸಂತ್ ಫತೇ ಸಿಂಗರು ತಮ್ಮ ' ಮಹತ್ವ ತ್ಯಾಗದ ಕಾರ್ಯಕ್ರಮ ಪ್ರಕಟಿಸುತ್ತಾರೆಂದು ವರದಿಯಾಗಿದೆ.

●

ವಿಶ್ವ ಶಾಂತಿ ರಕ್ಷಣೆಗೆ

ನವದೆಹಲಿ— ವಿಶ್ವದಲ್ಲಿ ಶಾಂತಿ, ರಕ್ಷಣೆ, ಭದ್ರತೆ ನೆಲಸಲು ಅಭಿವೃದ್ಧಿಗೊಳ್ಳುತ್ತಿರುವ ದೇಶಗಳು ಶೀಘ್ರ ಪ್ರಗತಿ ಹೊಂದುವುದು ಅವಶ್ಯಕವೆಂದು ಭಾರತ ನೀರಾವರಿ ಮಂತ್ರಿ ಡಾ|| ರಾವ್ ಹೇಳಿದರು.

★

ಪಾರ್ಲಿಮೆಂಟು

ನವದೆಹಲಿ— ಈ ಸ್ಥಿತಿಯಲ್ಲಿ ಪಾರ್ಲಿಮೆಂಟನ್ನು ಡಿಸಾಲ್ವ್ ಮಾಡುವುದು ಬುಡಕಟ್ಟುಕೋಮು ಮತ್ತು ಜನಾಂಗಕ್ಕೆ ತುಂಬಾ ಅಪಾಯಕಾರಿ ಎಂದು ಅಶೋಕ ಮೆಹ್ತಾ ಹೇಳಿದರು.

ಕೆಂಪು ಚೀಣಾಕ್ಕೆ ಸ್ಥಾನ

ವಿಶ್ವಸಂಸೆ— ಜನರಲ್ ಅಸೆಂಬ್ಲಿಯಲ್ಲಿ ಕೆಂಪು ಚೀಣಾವನ್ನು ವಿಶ್ವಸಂಸ್ಥೆಗೆ ತೆಗೆದು ಕೊಳ್ಳುವ ವಿಚಾರದ ಚರ್ಚೆ ಬಿರುಸಾಗಿತ್ತು. 17 ರಾಜ್ಯಗಳು, ಕೆಎಂಟ್ ಚೀಣಾವನ್ನು ತೆಗೆದು ಹಾಕಿ ಆ ಸ್ಥಾನವನ್ನು ಕೆಂಪು ಚೀಣಕ್ಕೆ ಕೊಡಲು ಬಯಸಿದವು ; ಆದರ 15 ರಾಜ್ಯಗಳು ವಿರೋಧಿಸಿದರು – ಇದು 126 ಸ್ಥಾಗಳ ಸಂಸ್ಥೆಯಿದ್ದು, 3 ನೇ 2 ಭಾಗದ ಷ್ಟು ಮತಗಳು ಠರಾವು ಮಂಜೂರಾತಿಗೆ ಅವಶ್ಯಕವು.

★

ಚೆನ್ನಾಗಿ ಯೋಚಿಸಬೇಕು

ಬೊಂಬಾಯಿ— ಪಾರ್ಲಿಮೆಂಟನ್ನು ಡಿಸಾಲ್ವ್ ಮಾಡುವುದನ್ನು ಪ್ರಧಾನಿಯರು ಯಾವ ಯೋಚನೆಯೂ ಇಲ್ಲದೆ ಅಧ್ಯಕ್ಷರಿಗೆ ಸೂಚನೆ ಕೊಡಬಾರದೆಂದೂ, ಅಧ್ಯಕ್ಷರು ಯಾವ ಯೋಚನೆಯೂ ಇಲ್ಲದೆ ಆಜ್ಞೆ ಮಾಡಬಾರದೆಂದೂ ಪಿಎಸ್ಪಿ ಅಧ್ಯಕ್ಷ ಶ್ರೀ ಗೋರೆ ಹೇಳಿದರು.

★

ಜಟಿಲ ಸಮಸ್ಯೆ

ಬಿಜಾಪುರ— ಇಂದಿರಾ ಗಾಂಧಿಯನರು ಯಾವ ಪಾರ್ಟಿಗೆ ಸೇರಿದವರೋ ನನಗೆ ಗೊತ್ತಿಲ್ಲ – ಅವರ ವಿರುದ್ಧ ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷಗಳು ತರಬಹುದಾದ ಅವಿಶ್ವಾಸ ಸೂಚನೆಗ ಮುಂಚೆಯೇ ಅವರು ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯಲ್ಲಿ ಮತ್ತೆ ವಿಶ್ವಾಸ ಪಡೆಯಬೇಕು ಎಂದು ಜನಸಂಘದ ಕಾರ್ಯದರ್ಶಿ ಶ್ರೀ ಜಗನ್ನಾಥ ರಾವ್ ಜೋಶಿ ಹೇಳಿದರು

★

ಎಂ ಪಿ ಸಿ ಸಿ

ಬೆಂಗಳೂರು— ಬಿಜಾಪುರದಲ್ಲಿ ತಾ|| 13–14 ರಂದು ನಡೆಯಲಿದ್ದ ಎಂ ಪಿ ಸಿ ಸಿ ಅಧಿವೇಶನವು ಮುಂದುನರಿಸಲಾಗಿದ್ದು ನಡೆಯುವ ತಾರೀಖು ತಾ|| 8 ರಂದು ನಿರ್ಧರಿಸಲಾಗುವುದೆಂದು ಗೊತ್ತಾಗಿದೆ.

ಚುನಾವಣಾ ಏಪಾರ್ಡು

ನವದೆಹಲಿ— ಪಾರ್ಲಿಮೆಂಟಿಗೆ ಹೊಸ ಚುನಾವಣೆ ಅವಶ್ಯಕತೆಗೆ ಚುನಾವಣಾಧಿಕಾರಿಗಳು ಎಲ್ಲ ಏರ್ಪಾಡುಗಳನ್ನೂ ಸಿದ್ಧಗೊಳಿಸುತ್ತಿದ್ದಾರೆ.

○

ಪಾರ್ಟಿಯಿಂದ ಇಂದಿರಾರ ಸಸ್ಪೆಂಡ್

ನವದೆಹಲಿ— ಪ್ರಧಾನಿ ಇಂದಿರಾರನ್ನು ಪಾರ್ಟಿಯಿಂದ ಸಸ್ಪೆಂಡು ಮಾಡಲಾಗುವುದೇ, ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರನ್ನು ಪತ್ರಿಕೆಯವರನ್ನು ಕೇಳಿದ್ದಕ್ಕೆ, ಇನ್ನೆರಡು ದಿನಗಳ ನಂತರ ತಮ್ಮನ್ನು ಕಾಣಲು ತಿಳಿಸಿದರು.

★

ಸರಕಾರಕ್ಕೆ ಪೌರಸಭೆ ಬೆದರಿಕೆ

ಶಿವಮೊಗ್ಗ— 3 ತಿಂಗಳೊಳಗೆ ನೀರು ಸರಬರಾಜಿನ ಮತ್ತು ಚರಂಡಿ ಸ್ಕೀಂಗೆ ರೂ 1 ಕೋಟಿಯನ್ನು ಸರಕಾರ ಮಂಜೂರ್ಮಾಡದಿದ್ದರೆ, ಪೌರಸಭಾ ಸದಸ್ಯರು ವಿಧಾನ ಸೌಧದ ಮುಂದೆ ಧರಣ ಮಾಡುವದಾಗಿ ನಿರ್ಧರಿಸಿರುವರು.

●

ಆರೋಪ

ಬೆಂಗಳೂರು— ಪ್ರಧಾನಿಯವರು ರಾಜ್ಯಕ್ಕೆ ಭೇಟಿ ಕೊಟ್ಟಾಗ, ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಮತ್ತು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ವಿರುದ್ಧ ಮತ್ತೆ ಹೊಸ ಆರೋಪಗಳ ಮೆಮೊರಾಂಡಂ ಅರ್ಪಿಸಲಿರುವರು.

○

ರಷ್ಯಾ ಹಣವೇ

ತ್ರಿವೇಂದ್ರಂ— ಕಾಂಗ್ರೆಸ್ ಪಾರ್ಟಿ ಒಡಕಿಗೆ ರಷ್ಯಾದ ಆರ್ಥಿಕ ನೆರವು ಇದೆಯೆಂದು ಕೇರಳದ ಮೂರು ಮಂದಿ ಯುವ ಕಾಂಗ್ರೆಸಿಗರು ಆರೋಪಿಸಿರುವರು.

"Bank Road Bahusar – A Fair Price Shop in Actual Practice"

(2)

ರೈಲ್ವೆ ಶಾಖೆಗೆ 72 ಕೋಟಿ ರೂಪಾಯಿ ವರಮಾನ

ರೈಲ್ವೆ ಶಾಖೆಯು ಈ ವರ್ಷ ಸೆಪ್ಟೆಂಬರ್ ಮಾಸದಲ್ಲಿ 72.72 ಕೋಟಿ ವರಮಾನ ಪಡೆಯಿತು. ಇದು ಕಳೆದ ವರ್ಷದ ಇದೇ ಮಾಸದ ವರಮಾನಕ್ಕಿಂತ 3.43 ಕೋಟಿ ರೂಪಾಯಿ ಹೆಚ್ಚಾಗಿತ್ತು. ಈ ವರ್ಷ ಏಪ್ರಿಲ್-ಸೆಪ್ಟೆಂಬರ್ ಮಾಸಗಳ ಅವಧಿಯ ರೈಲ್ವೆ ವರಮಾನವು ಕಳೆದ ವರ್ಷದ ಇದೇ ಅವಧಿಗಿಂತ 27.82 ಕೋಟಿ ರೂಪಾಯಿ ಹೆಚ್ಚಾಗಿತ್ತು.

ರಾಜ್ಯದಲ್ಲಿ ಕುಟುಂಬ ಯೋಜನೆ ಪ್ರಗತಿ

ಪ್ರಸಕ್ತ ವಾರ್ಷಿಕ ಸಾಲಿನ ಆರು ಮಾಸಗಳ ಅವಧಿಯಲ್ಲಿ 'ರಾಜ್ಯದ ಚಿತ್ರದುರ್ಗ ಜಿಲ್ಲೆಯು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯಲ್ಲೂ, ಮಂಡ್ಯ ಜಿಲ್ಲೆಯು ಗರ್ಭನಿರೋಧಕ ಕಾರ್ಯಕ್ರಮವಲ್ಲೂ ಅಗ್ರಸ್ಥಾನ ಪಡೆದಿದೆ.

ವಾಣಿಜ್ಯ ಒಪ್ಪಂದ

ಭಾರತ ಮತ್ತು ಜೆಕೋಸ್ಲೊವಾಕಿಯಗಳ ನಡುವಣ ದೀರ್ಘಾವಧಿಯ ವಾಣಿಜ್ಯ ಮತ್ತು ಮರುಪಾವತಿ ಒಪ್ಪಂದಕ್ಕೆ ಭಾರತದ ಪರವಾಗಿ ಕೇಂದ್ರ ಸರ್ಕಾರದ ವಿದೇಶಾಂಗ ವಾಣಿಜ್ಯ ಶಾಖೆಯ ಮಂತ್ರಿಗಳಾದ ಶ್ರೀ ಬಿ. ಆರ್. ಭಗತ್‌ರವರು ಇತ್ತೀಚೆಗೆ ಸಹಿಹಾಕಿದರು.

4 ನೇ ಯೋಜನೆ

4 ನೇ ಯೋಜನೆಯ ಕರಡಿನ ಮುಖ್ಯಾಂಶಗಳನ್ನು ಕುರಿತು ಈ ವರ್ಷದ ನವೆಂಬರ್– ಡಿಸೆಂಬರ್ ತಿಂಗಳುಗಳ ಅವಧಿಯಲ್ಲಿ ವಿವರವಾದ ಚರ್ಚೆಯನ್ನು ಏರ್ಪಡಿಸಬೇಕೆಂದು ನವ ದೆಹಲಿಯಲ್ಲಿ ಸಭೆ ಸೇರಿದ್ದ ಯೋಜನಾ ಸಂಬಂಧವಾದ ಪಾರ್ಲಮೆಂಟ್ ಸದಸ್ಯರ ಅನೌಪಚಾರಿಕ ಸಲಹಾ ಸಮಿತಿಯು ನಿರ್ಧರಿಸಿದೆ.

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

SHAKTI
SUDHA
A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 4-ನೇ ವಾರ
ಶಿನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ. — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶಿಕಪೂರ್ ಬಬಿತಾ ಜಾನಿವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 2 ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....
ತುಣ್ಬವನ್
ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್
ನಿರ್ದೇಶನ : ಎಂ ಎಂ ತಿರುಮಂಗಂ
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮುಖ್ಯ ಪ್ರಾಣಿದಯಾ ಕಾರ್ಯಗಳು ಹಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore